ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ದೇವನಹಳ್ಳಿ

**ಪಿಡಬ್ಲ್ಯೂ.1** **ಓ.ಎಸ್** ಸಂಖ್ಯೆಃ **658/2014**

**ದಿಃ 04.07.2026 ರಂದು ಪಿಡಬ್ಲ್ಯೂ-1 ರವರನ್ನು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ.ಟಿ ಆರ್ ಆರ್ ವಕೀಲರಿಂದಃ**

1. ನಾನು 7 ನೇ ತರಗತಿ ವರೆಗೆ ವ್ಯಾಸಂಗ ಮಾಡಿದ್ದೆನೆ. ನನಗೆ ಕನ್ನಡ ಓದಲು ಸ್ವಲ್ಪ ಬರುತ್ತದೆ. ನಾನು ಚಿನ್ನ ಬೆಳ್ಳಿ ಆಭರಣ ತಯಾರಿಸುವ ಕೆಲಸ ಮಾಡುತ್ತೇನೆ. ನಾನು ಸ್ವಂತವಾಗಿ ಅಂಗಡಿ ಇಟ್ಟುಕೊಂಡಿದ್ದೇನೆ. ನನಗೆ ಹಣಕಾಸಿನ ವ್ಯವಹಾರದ ಜ್ಞಾನ ಇದೆ ಎಂದರೇ ಸರಿ. ನನಗೆ ಮುನಿಯಪ್ಪ ಎಂಬುವವರು ದಲ್ಲಾಳಿ ಕೆಲಸ ಮಾಡುವ ಗೋಪಾಲ್ ಎಂಬುವವರನ್ನು ಪರಿಚಯ ಮಾಡಿಕೊಟ್ಟಿದ್ದು, ಅವರು ಪ್ರತಿವಾದಿಯನ್ನು ನನಗೆ ಪರಿಚಯ ಮಾಡಿರುತ್ತಾರೆ. ನಾನು ಜಾಗ ಖರೀದಿ ಮಾಡುವ 6 ತಿಂಗಳ ಮೊದಲು ಪ್ರತಿವಾದಿ ಪರಿಚಯ ಆಗಿರುತ್ತಾರೆ. ಪ್ರತಿವಾದಿಗೆ ಹಣದ ಅವಶ್ಯಕತೆ ಇತ್ತು ಆ ಕಾರಣದಿಂದ ದಾವಾ ಸ್ವತ್ತನ್ನು ನನಗೆ ಮಾರಾಟ ಮಾಡುವುದಾಗಿ ತಿಳಿಸಿದರು. ದಾವಾ ಸ್ವತ್ತಿನ ಖಾತೆ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ಸದರಿ ಖಾತೆ ದಾಖಲೆಯನ್ನು ನನಗೆ ನೀಡಿದ್ದರು. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೋಂದರೆ ಇಲ್ಲ ಎಂದರೇ ಸಾಕ್ಷಿ ಅವರು ನನಗೆ ದಾಖಲೆಯನ್ನು ತೋರಿಸಿದ್ದು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಯನ್ನು ತೆಗೆದುಕೊಳ್ಳಬಹುದೇ ಎಂಬ ಬಗ್ಗೆ ನಾನು ಯಾರನ್ನು ಸಹ ಕಾನೂನು ಅಭಿಪ್ರಾಯ ಕೇಳಿರುವುದಿಲ್ಲ. ಸಾಕ್ಷಿ ಮುಂದುವರೆದು ಮುನಿಯಪ್ಪ ಎಂಬುವವರು ಸದರಿ ಜಾಗ ಪ್ರತಿವಾದಿಗೆ ಸೇರಿದ್ದು, ಅದನ್ನು ತೆಗೆದುಕೊಳ್ಳಬಹುದು ಎಂದು ಹೇಳಿದರು ಎಂದು ನುಡಿಯುತ್ತಾರೆ. ನಮಗೆ ಹಣಕಾಸನ್ನು ಹೊಂದಿಸಲು ಸಮಯ ಬೇಕಾಗಿದ್ದರಿಂದ ನಿಪಿ1 ರಲ್ಲಿ ಹೇಳಿರುವಂತೆ ಸಮಯಾವಕಾಶವನ್ನು ಪಡೆದುಕೊಂಡಿರುತ್ತೇವೆ. ನಾನು ಮೊದಲು ಪ್ರತಿವಾದಿ ಜೋತೆ ಮಾತನಾಡಿ 10 ಸಾವಿರ ರೂಪಾಯಿ ಮುಂಗಡ ಹಣ ನೀಡಿದ್ದು, ಮಾರನೇ ದಿನ ಕ್ರಯದ ಕರಾರು ಪತ್ರ ಬರೆಸಿಕೊಂಡಿರುತ್ತೇವೆ. ನಿಪಿ-1 ದಾಖಲೆಯನ್ನು ಕೆ ಗೋಪಾಲ್ ಮತ್ತು ಪ್ರತಿವಾದಿ ನಾಗರಾಜು ರವರು ಹೇಳಿ ಬರೆಸಿರುತ್ತಾರೆ. ನಿಪಿ-1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. ನಿಪಿ-1 ರಲ್ಲಿ 6 ತಿಂಗಳ ಒಳಗಾಗಿ ಕ್ರಯ ಪತ್ರ ಬರೆದುಕೊಡಬೇಕು ಎಂಬ ಷರತ್ತು ಇರುತ್ತದೆ. ಸಾಕ್ಷಿಗೆ ಒಂದು ನಕಲು ಕ್ರಯದ ಕರಾರು ಪತ್ರವನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿ ತನ್ನದಲ್ಲ ಎಂದು ನುಡಿಯುತ್ತಾರೆ. ನಿಪಿ-1 ದಾಖಲೆಯನ್ನು ಗೋಪಾಲ್

ಎಂಬುವವರು ತಯಾರಿಸಿರುತ್ತಾರೆ.

3. ನಿಪಿ-1 ದಾಖಲೆಗೆ ಸಹಿ ಮಾಡುವಾಗ ಮಧ್ಯಾಹ್ನ ಸುಮಾರು 02.00 ಗಂಟೆ ಆಗಿರಬಹುದು. ನಿಪಿ-1 ರಂತೆ 6 ತಿಂಗಳ ಒಳಗೆ ಕ್ರಯ ಪತ್ರ ಮಾಡಿಸಿಕೊಳ್ಳಬೇಕು ಎಂಬ ಷರತ್ತು ಇದೆ ಎಂದರೇ ಸರಿ. ಸದರಿ ವಿಚಾರ ನನಗೆ ಗೊತ್ತಿತ್ತು. 6 ತಿಂಗಳ ಒಳಗೆ ಕ್ರಯ ಪತ್ರ ಬರೆದುಕೊಡುವಂತೆ ಪ್ರತಿವಾದಿಗೆ ನೋಟಿಸ್ ನೀಡಲು ತೊಂದರೇ ಇರಲಿಲ್ಲ ಎಂದರೇ ಸಾಕ್ಷಿ, ನಾನು ಅವರನ್ನು ಕರೆದಿದ್ದು ಅವರು ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ. ಯಾವ ದಿನಾಂಕದಂದು ನಾನು ಪ್ರತಿವಾದಿಯನ್ನು ಸಂಪರ್ಕಿಸಿದ್ದೆ ಎಂದು ಈಗ ಹೇಳಲು ಆಗುವುದಿಲ್ಲ. ಈ ಬಗ್ಗೆ ಇನ್ನು ಸಮಯ ಬೇಕು ಎಂಬುದಾಗಿ ಪ್ರತಿವಾದಿಯು ಬರವಣಿಗೆ ರೂಪದಲ್ಲಿ ನೀಡಿರುವುದಿಲ್ಲ. ಸಮಯ ವಿಸ್ತರಣೆ ಮಾಡುವ ಬಗ್ಗೆ ಬರವಣಿಗೆಯಲ್ಲಿ ನೀಡುವಂತೆ ನಾನು ಪ್ರತಿವಾದಿಗೆ ಕೇಳಿರುವುದಿಲ್ಲ. 6 ತಿಂಗಳ ಒಳಗಾಗಿ ಕ್ರಯಪತ್ರ ಬರೆದುಕೊಡುವಂತೆ ಮೊಬೈಲ್ ಮೂಲಕ ಸಂದೇಶ ಕಳುಹಿಸಲು ಅಥವಾ ವಕೀಲರ ನೋಟಿಸ್ ನೀಡಲು ತೋಂದರೇ ಇರಲಿಲ್ಲ ಎಂದರೇ ಸಾಕ್ಷಿ ನಾನು ಹಲವಾರು ಬಾರಿ ಫೋನ್ ನಲ್ಲಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮುನಿಯಪ್ಪ ರವರಿಗೂ ಸಹ ಈ ವಿಚಾರ ತಿಳಿಸಿರುತ್ತೆನೆ. ಪ್ರತಿವಾದಿಯ ಫೋನ್ ನಂಬರ್ ನನಗೆ ಈಗ ನೆನಪಿಲ್ಲ. ನಿಪಿ-1 ದಾಖಲೆ ಆದ ನಂತರ 3 ವರ್ಷ ಮುಗಿಯಲು ಸುಮಾರು 15 ದಿನ ಇರುವಾಗ ನಾನು ಪ್ರತಿವಾದಿಗೆ ವಕೀಲರ ನೋಟಿಸ್ ನೀಡಿರುತ್ತೇನೆ. ನಾನು ಮೊದಲ ಬಾರಿಗೆ ಮತ್ತು ಕೊನೆಯ ಬಾರಿಗೆ ಪ್ರತಿವಾದಿಯನ್ನು ಕ್ರಯಪತ್ರ ಬರೆದುಕೊಡುವಂತೆ ಯಾವ ದಿನಾಂಕದಂದು ಕೇಳಿದ್ದೆ ಎಂದು ಈಗ ಹೇಳಲು ಆಗುವುದಿಲ್ಲ. ನನ್ನ ಬಳಿ ಕರಾರಿನ ಉಳಿಕೆ ಹಣ ಇಲ್ಲದ ಕಾರಣ ನಾನು 6 ತಿಂಗಳ ಒಳಗಾಗಿ ಪ್ರತಿವಾದಿಯನ್ನು ಕ್ರಯಪತ್ರ ಬರೆದುಕೊಡುವಂತೆ ಕೇಳಿಲ್ಲ ಎಂದರೇ ಸರಿಯಲ್ಲ. ನನ್ನ ಬಳಿ ಉಳಿಕೆ ಹಣ ಇಲ್ಲದ ಕಾರಣ ಪ್ರತಿವಾದಿಗೆ ವಕೀಲರ ನೋಟಿಸ್ ನೀಡಿಲ್ಲ ಎಂದರೇ ಸರಿಯಲ್ಲ. ಆ ಸಮಯದಲ್ಲಿ ನನ್ನ ಬಳಿ ಉಳಿಕೆ ಹಣ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರು ಮಾಡಲು ತೊಂದರೇ ಇಲ್ಲ. ನನಗೆ 2012 ರಲ್ಲಿ ತಿಂಗಳಿಗೆ 50 ಸಾವಿರದಿಂದ 5 ಲಕ್ಷ ದ ವರೆಗೆ ಆದಾಯ ಬರುತ್ತಿತ್ತು. ನಾನು 2012 ನೇ ಸಾಲಿನಲ್ಲಿ ಆದಾಯ ತೆರಿಗೆ ಪಾವತಿ ದಾರನಾಗಿರುವುದಿಲ್ಲ. ಈಗ ಸುಮಾರು ವರ್ಷಗಳಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದು, ಯಾವ ವರ್ಷದಿಂದ ಮಾಡುತ್ತಿದ್ದೇನೆ ಎಂದು ಈಗ ನೆನಪಿಲ್ಲ. ನನ್ನ ಆದಾಯ ತೆರಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರು ಮಾಡಲು ಕಷ್ಟ ಆಗುತ್ತದೆ. ನನಗೆ 2-3 ಬ್ಯಾಂಕುಗಳಲ್ಲಿ ಖಾತೆ ಇದೆ. ನನಗೆ 2011 ರಿಂದ ಬ್ಯಾಂಕ ಖಾತೆ ಇದೆ. ನನ್ನ 2012 ರ ಸಾಲಿನ ಬ್ಯಾಂಕ ಸ್ಟೆಟಮೆಂಟ ಕೊಡಲು ತೊಂದರೇ ಇಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟಿ ಸವಾಲಿಗೆ ಕಾಲಾವಕಾಶ ಕೊಡಲಾಯಿತು.)**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ,**